# ಓಡಾಡುವ ಉದ್ಯಾನವನ!







■ ಸುಭಾಸ ಯಾದವಾಡ

ಪಶ್ಚಿಮ ಬಂಗಾಲದ ರಾಜಧಾನಿ ಕೋಲ್ಕತ್ತಾದ ಬೇಸಿಗೆ ನಿಜಕ್ಕೂ ಭಯಾನಕ. ಅಲ್ಲಿನ ತಾಪಮಾನ 40 ಡಿಗ್ರಿ ಸೆಲ್ಸಿಯಸ್ ಅನ್ನು ದಾಟುತ್ತದೆ. ಮಧ್ಯಾಹ್ನದ ಸಮಯದಲ್ಲಿ ಜನರ ಓಡಾಟ ಸ್ಥಗಿತಗೊಳ್ಳುತ್ತದೆ. ಸಂಚಾರಕ್ಕೆ ಬಾಡಿಗೆ ವಾಹನಗಳು ಕೂಡಾ ದೊರೆಯುವುದಿಲ್ಲ. ಪೋದ್ದಾರ ಎಂಬ ಟ್ಯಾಕ್ಸಿ ಚಾಲಕ, ಅಲ್ಲಿನ ಬಿರುಬಿಸಿಲಿಗೆ ಬಲಿಯಾಗಿ ಅಸುನೀಗಿದ್ದೇ ಅದಕ್ಕೆ ಕಾರಣವಾಯಿತು. ಆ ಘಟನೆಯಿಂದಾಗಿ ಅಲ್ಲಿನ ಟ್ಯಾಕ್ಸಿ ಚಾಲಕರ ಸಂಘ ಪೂರ್ವಾಹ್ನ 11 ಗಂಟೆಯಿಂದ ಸಾಯಂಕಾಲ 4 ಗಂಟೆಯವರೆಗೆ ಟ್ಯಾಕ್ಸಿಗಳನ್ನು ಓಡಿಸಬಾರದು ಎಂಬ ನಿರ್ಧಾರಕ್ಕೆ ಬಂತು.

ಜನರ ಸಂಚಾರಕ್ಕೆ ಸದಾಕಾಲ ಲಭ್ಯವಿರಬೇಕಾದ ಟ್ಯಾಕ್ಸಿ ಸೇವೆ, ಹಗಲಿನ 5 ಗಂಟೆಗಳ ಕಾಲ ದೊರೆಯದೇ ಹೋದರೆ ಹೇಗೆ ಎಂಬ ಚಿಂತನೆ ಒಬ್ಬ ಟ್ಯಾಕ್ಸಿ ಚಾಲಕನನ್ನು ಕಾಡಿತು. ಆತ ಕಾರ್ಯಪ್ರವೃತ್ತನಾದ. ಆತನ ಹಳದಿ ಕಾರು, ಹಸಿರು ರಥವಾಗಿ ಪರಿವರ್ತನಗೊಂಡಿತು. ಅದೀಗ ದಿನವಿಡೀ ಸಂಚಾರಕ್ಕೆ ಸನ್ನದ್ಧಗೊಂಡಿದೆ.

ಹಸಿರು ರಥದ ಸಾರಥಿಯ ಹೆಸರು ಧನಂಜಯ ಚಕ್ರವರ್ತಿ. 'ಸಾಬುಜ್ ರಥ' ಎಂದು ಕರೆಯಲ್ಪಡುವ ಆ ಕಾರು, ತನ್ನ ತಲೆಯ ಮೇಲೆ ಹಸಿರು ಹುಲ್ಲಿನ ಚಿಕ್ಕ ಉದ್ಯಾನವನವನ್ನು ಹೊತ್ತು ಕೋಲ್ಕತ್ತ ನಗರವನ್ನೆಲ್ಲ ಸುತ್ತುತ್ತಿದೆ. ಕಾರಿನ ಹೊರಗಷ್ಟೇ ಅಲ್ಲ, ಅದರ ಒಳಗೂ ಹುಲ್ಲಿದೆ. ಗಿಡಗಂಟಿ ಆರ್ಕಿಡ್‌ಗಳನ್ನು ಬೆಳೆಸಿದ ಸುಂದರ ಮಣ್ಣಿನ ಕುಂಡಗಳಿವೆ. ಅವುಗಳಿಂದಾಗಿ ನೈಸರ್ಗಿಕ ವಾತಾನುಕೂಲಿತ ಕಾರ್ ಆಗಿ ಪರಿವರ್ತನಗೊಂಡಿದೆ. ಅದು ಹೋದಲ್ಲೆಲ್ಲ, ಜನ ನೋಡಲು ನೆರೆಯುತ್ತಾರೆ. ಬೆರಗುಗಣ್ಣುಗಳಿಂದ ನೋಡಿ ಆಶ್ಚರ್ಯ ಪಡುತ್ತಾರೆ. ಕೆಲವರಂತೂ ಆ ಕಾರಿನ ಖಾಯಂ ಅಭಿಮಾನಿಗಳೇ ಆಗಿದ್ದಾರೆ.

ಹಸಿರು ಹುಲ್ಲು, ಅದನ್ನು ಬೆಳೆಸಲು ಬಳಸಿದ ಮಣ್ಣು, ಗಿಡಗಂಟಿಗಳ ಕುಂಡ; ಎಲ್ಲವುಗಳ ಒಟ್ಟು ತೂಕ 65 ಕಿಲೋ. ಈ ಚಲಿಸುವ ಉದ್ಯಾನ-ವನವನ್ನು ಬೆಳೆಸಲು ಧನಂಜಯ 22 ಸಾವಿರ ರೂಪಾಯಿ ಖರ್ಚು ಮಾಡಿದ್ದಾನೆ. ಈ ಹೆಚ್ಚುವರಿ ಭಾರವನ್ನು ಎಳೆಯಲು ಒಂದಿಷ್ಟು ಹೆಚ್ಚು ಇಂಧನದ ಬಳಕೆಯೂ ಆಗುತ್ತದೆ. ಏನೇ ಆದರೂ, ಸೇವೆ ಪಡೆಯುವ ಪ್ರಯಾಣಿಕರಿಗೆ ಈ ಹಸಿರು ವಾಹನ ಸುಖಾನುಭವ ನೀಡುತ್ತದೆ ಎಂಬ ತೃಪ್ತಿ ಆತನಿಗಿದೆ. ಅಷ್ಟೇ ಅಲ್ಲ, ಅದು ಹೋದಲ್ಲೆಲ್ಲ, ತನ್ನ ಸುತ್ತಮುತ್ತ ಒಂದು ಬಗೆಯ ಆಹ್ಲಾದಕರ ವಾತಾವರಣವನ್ನು ಹರಡುತ್ತದೆ. ನೋಡುವವರ ಮನಸ್ಸಿಗೆ ಮುದ ನೀಡುತ್ತದೆ.

ಗಮನಿಸಬೇಕಾದ ಸಂಗತಿ ಎಂದರೆ, ಈ ಹಳದಿ-ಹಸಿರು ಕಾರು ಧನಂಜಯನ ಸ್ವಂತ ವಾಹನವಲ್ಲ. ಆತ ಅದರ ಚಾಲಕ ಮಾತ್ರ. ಅಮರಸಿಂಗ್ ಎಂಬ ವ್ಯಕ್ತಿ ವಾಹನದ ಮಾಲಿಕ. ಆತನ ಐದು ಕಾರುಗಳಲ್ಲಿ ಧನಂಜಯ ಓಡಿಸುವ ಹಸಿರು ರಥವೂ ಒಂದು. ಮಾಲೀಕ ಅಮರಸಿಂಗನ ಪ್ರಕಾರ ಧನಂಜಯ ಅತ್ಯಂತ ಸಮರ್ಥ ಚಾಲಕ. ಧನಂಜಯ ಓಡಿಸುವ ಕಾರು ಅತ್ಯಂತ ಸುರಕ್ಷಿತ, ಅದು ಎಂದೂ ಅಪಘಾತಕ್ಕೀಡಾಗುವುದಿಲ್ಲ ಎಂಬ ಭರವಸೆ ಮಾಲೀಕನಿಗಿದೆ. ಧನಂಜಯನ ಎಲ್ಲ ಚಿಂತನೆಗಳಿಗೆ ಮಾಲಿಕ ಅಮರಸಿಂಗ್ ಅವರ ಸಂಪೂರ್ಣ ಬೆಂಬಲವೂ ಇದೆ. ಹೀಗಾಗಿಯೇ ಕೋಲ್ಕತ್ತಾದಲ್ಲಿ ಈ ಪುಟ್ಟ ಉದ್ಯಾನವನ ನಿರಂತರವಾಗಿ ಓಡಾಡುತ್ತಿದೆ. ●